ನಡೆಯಬೇಕೆಂಬುದು ಸರ್ಕಾರದ ಇಚ್ಛೆಯಾಗಿದೆ ಎಂದು ನಾನು ಹೇಳಿದ್ದೇನೆ ಆದರೆ ಕಾರ್ಪೊರೇಷನಿಂದ ಮುಂದುವರಿಸಬೇಕೋ ಅಥವಾ ಬೇರೆ ಏಜೆನ್ಸಿಯಿಂದ ಮುಂದುವರಿಸಬೇಕೋ ಎಂಬುದು ಸರ್ಕಾರದ ಗಮನದಲ್ಲಿದೆ.

ಶ್ರೀ ಟಿ. ಎಂ. ಮಂಜುನಾಥ – ನಗರ ಸಭೆಗೆ ಈಗಾಗಲೇ ಇದನ್ನು ವಹಿಸಿದ್ದಿರಿ ಮುಂದೆ ಚಲನಚಿತ್ರ ಕಾರ್ಪೊರೇಷನ್‌ಗೆ ವಹಿಸಬೇಕು ಎಂಬ ಅಭಿಪ್ರಾಯ ಇದೆಯೆಂದು ಹೇಳಿದ್ದಿರಿ, ನಾನು ಹೇಳುವುದು ಎರಡು ಸಂಸ್ಥೆಗಳಿಗೂ ಕೊಡದೆ ನೇರವಾಗಿ ಸರ್ಕಾರವೇ ವಹಿಸಿಕೊಂಡು ವೀರಣ್ಣನವರ ಹೆಸರನ್ನಿಟ್ಟು ನಾಟಕ ಶಾಲೆ ಸ್ಥಾಪನೆ ಮಾಡಿ ಸಣ್ಣ ಸಣ್ಣ ನಾಟಕ ಸಂಸ್ಥೆಯವರು ನಾಟಕ ಪ್ರದರ್ಶನ ಮಾಡುವುದಕ್ಕೆ ಪ್ರೋತ್ಸಾಹ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ಸ್ವಾಮಿ ?

ಶ್ರೀ ಡಿ. ಕೆ. ನಾಯ್ಕರ್—ಜಾಗ ಕಾರ್ಪೊರೇಷನ್ನಿನದು. ಈಗಾಗಲೇ ಇದ್ದ ಬಿಲ್ಡಿಂಗನ್ನು ಡಿಸ್ಮಾಂಟಲ್ ಮಾಡಿ ಪುನಃ ಪ್ರಿಂತ್ ಲೆವಲ್ಲಿಗೆ ಬಿಲ್ಡಿಂಗ್ ಕನ್‌ಸ್ಟ್ರಕ್ ಮಾಡಿದ್ದಾರೆ. ಹಣ ಖರ್ಚು ಮಾಡಿದ್ದು ಕಾರ್ಪೊರೇಷನ್ನಿನದು. ಅವರೇ ಖರ್ಚು ಮಾಡಿದ್ದಾರೆ. ಸರ್ಕಾರ ಮಾಡಬೇಕು ಎಂಬುದು ಇಲ್ಲಕಾರ್ಪೊನೇಷನ್ ಆಗುವುದಿಲ್ಲ ಎಂದು ಹೇಳಿದರೆ ಮುಂದಿನ ಪ್ರಶ್ನೆ ಉದ್ಭವವಾಗುತ್ತದೆ.

ಶ್ರೀ ಟಿ. ಆರ್. ಶಾಮಣ್ಣ—ಸಿನಿಮಾ ಹಾವಳಿಯಿಂದ ನಾಟಕ ಕಲೆ ಸಾಯುತ್ತಾ ಇರತಕ್ಕುದ್ದು ಮಾನ್ಯ ಮಂತ್ರಿಗಳಿಗೆ ಗೊತ್ತಿಲ್ಲವೆ. ಫಿಲ್ಮ್ ಛೇಂಬರ್‌ನವರಿಗೆ ಕೊಟ್ಟರೆ ಸಿನಿಮಾಕ್ಕೆ ಕಟ್ಟಡವನ್ನು ಉಪಯೋಗಿಸತಕ್ಕ ಸಂದರ್ಭ ಇರುತ್ತದೆ. ದಯವಿಟ್ಟು ತಾವು ಇದನ್ನು ನಾಟಕ ಆಡತಕ್ಕ ಮಂದಿರವಾಗಿ ಇಡಬೇಕು ಎಂಬ ಬಗ್ಗೆ ಖಚಿತವಾದ ತೀರ್ಮಾನ ಮಾಡುತ್ತೀರಾ ಸ್ವಾಮಿ

ಶ್ರೀ ಡಿ. ಕೆ. ನಾಯ್ಕರ್—ಮಾನ್ಯ ಸದಸ್ಯರಿಗೆ ನಾನು ಹೇಳುವ ಪ್ರಕಾರ ನಾಟಕ ಕಲೆಗೆ ಪ್ರೋತ್ಸಾಹ ಕೊಡಬೇಕು ಎಂಬುದು ನಮ್ಮ ಉದ್ದೇಶ. ಸಿನಿಮಾ ನಡೆಸಬೇಕು ಎಂಬುದು ಸರ್ಕಾರದ ಉದ್ದೇಶ ಅಲ್ಲ.

SRI K. PUTTASWAMY— Was there any understanding between the parties when this theatre was sold to the Corporation that it would be in the name of Gubbi Veeranna and that dramas would be staged in it

SRI D. K. NAIKAR.—There was the understanding that it would be in the name of Gubbi Veeranna and that dramas should be staged in it?

ಅರಸೀಕೆರೆಯಲ್ಲಿ ಹೊಸ ಬಾಲಕಿಯರ ಪ್ರಾಥಶಾಲೆ ಕಟ್ಟಡವನ್ನು ನಿರ್ಮಿಸುವುದು

144. ಶ್ರೀ ಅನಿವಾಳದ ನಂಜಪ್ಪ (ಅರಸೀಕೆರೆ).—ಲೋಕೋಪಯೋಗಿ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—

(ಅ) ಅರಸೀಕೆರೆ ನಗರದಲ್ಲಿರುವ ಹೆಣ್ಣು ಮಕ್ಕಳ ಪ್ರೌಢಶಾಲೆಗೆ ಸ್ವಂತ ಕಟ್ಟಡವಿಲ್ಲದೇ ಈಗ ಇರುವ ಬಾಡಿಗೆ ಕಟ್ಟಡ ರಿಪೇರಿ ಆಗದೆ ಶಿಥಿಲವಾಗಿರುವುದಲ್ಲದೆ ತೀವ್ರ ಸ್ಥಳಾಭಾವದಿಂದ ವಿದ್ಯಾರ್ಥಿನಿಯರಿಗೆ ತೊಂದರೆ ಆಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದರೆ ಶೀಘ್ರದಲ್ಲಿಯೇ ಹೊಸ ಕಟ್ಟಡ ನಿರ್ಮಿಸಲು ಸರಕಾರದವರು ಕ್ರಮ ಕೈಗೊಳ್ಳಲು ಉದ್ದೇಶಿಸಿದ್ದಾರೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಮಂತ್ರಿಗಳು)

(ಅ) ಬಂದಿದೆ.

(ಆ) ಇದನ್ನು ಪರಿಶೀಲಿಸಲಾಗುವುದು.

ಶ್ರೀ ಆನಿವಾಳದ ನಂಜಪ್ಪ.—ಸ್ವಾಮಿ, ಅರಸೀಕೆರೆ ನಗರದಲ್ಲಿರುವ ಹೆಣ್ಣುಮಕ್ಕಳ ಪ್ರೌಢ ಶಾಲೆಗೆ ಸ್ವಂತ ಕಟ್ಟಡವಿಲ್ಲದೇ ಈಗ ಇರುವ ಬಾಡಿಗೆ ಕಟ್ಟಡ ರಿಪೇರಿ ಆಗದೆ ಶಿಥಲವಾಗಿರುವುದಲ್ಲದೆ ತೀವ್ರ ನ್ಯೂನಾಭಾವದಿಂದ ವಿದ್ಯಾರ್ಥಿನಿಯರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ನನ್ನ ಮೊದಲನೇ ಪ್ರಶ್ನೆಗೆ ತಾವು 'ಗಮನಕ್ಕೆ ಬಂದಿದೆ' ಎಂದು ಉತ್ತರ ಕೊಟ್ಟಿದ್ದೀರಿ. ತಮ್ಮ ಗಮನಕ್ಕೆ ಬಂದು ಎಷ್ಟು ವರ್ಷವಾಯಿತು ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಬಂದಿದೆ.

ಶ್ರೀ ಆನಿವಾಳದ ನಂಜಪ್ಪ.—ಅದು 150 ವರ್ಷಗಳ ಹಿಂದಿನ ಕಟ್ಟಡ. ಇದರಲ್ಲಿ ಅನೇಕ ಬಿರುಕುಗಳು ಬಿಟ್ಟುಕೊಂಡಿದ್ದು ಹಾವು, ಚೇಳುಗಳಿಂದ ಮಕ್ಕಳಿಗೆ ತೊಂದರೆಯಾಗಿರುವುದನ್ನು ತಾವು ತಿಳಿದುಕೊಂಡಿದ್ದೀರಾ ಸ್ವಾಮಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾಲ್ಲೂಕ ಬೋರ್ಡಿನವರು 73-74ರಲ್ಲಿ ಸ್ವಲ್ಪ ಭಾಗವನ್ನು ರಿಪೇರಿ ಮಾಡಿಸಿದ್ದಾರೆ. ಆ ಕಟ್ಟಡ ಸರ್ಕಾರಕ್ಕೆ ಸೇರಿದುದಲ್ಲ, ತಾಲ್ಲೂಕು ಬೋರ್ಡಿಗೆ ಸೇರಿದ್ದು. ತಾವು ತಾಲ್ಲೂಕ್ ಬೋರ್ಡಿನ ಸದಸ್ಯರಾಗಿದ್ದೀರೋ ಇಲ್ಲವೋ ಗೊತ್ತಿಲ್ಲ, ಈ ವಿಷಯವನ್ನು ತಾಲ್ಲೂಕ್ ಬೋರ್ಡಿನಲ್ಲಿ ಮೂವ್ ಮಾಡಿ ಕಟ್ಟಡ ರಿಪೇರಿ ಮಾಡಿಸುವುದು ನೂಕ್ತ.

ಶ್ರೀ ಆನಿವಾಳದ ನಂಜಪ್ಪ.—ಈಗಿರತಕ್ಕ ಕಟ್ಟಡದಲ್ಲೆ ಅರ್ಧ ಹೆಣ್ಣುಮಕ್ಕಳಿಗೆ ಜಾಗ ಆಗುವುದಿಲ್ಲ. ಒಂದೊಂದು ಕಾಸ್ಲಿನಲ್ಲಿ 80 ರಿಂದ 100 ಹುಡುಗರು ಇರುತ್ತಾರೆ. ನಣ್ಣನಣ್ಣ ರೂಮಿನಲ್ಲೆ ಪಾಠಶಾಲೆ ನಡೆಯುತ್ತಿದೆ. ಆದಷ್ಟು ಜಾಗ್ರತೆ ಹೊಸ ಕಟ್ಟಡವನ್ನು ಪ್ರಗತಿಯ ದೃಷ್ಟಿಯಿಂದ ಮಾಡಿಸಿಕೊಡುತ್ತೀರಾ ಸ್ವಾಮಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೊಸ ಕಟ್ಟಡ ಕಟ್ಟುವುದಕ್ಕೆ 4,58,000 ರೂಪಾಯಿ ಅಂದಾಜು ತಯಾರು ಮಾಡಿದ್ದೇವೆ. ವಿದ್ಯಾ ಇಲಾಖೆಯಿಂದ ಹಣ ಒದಗಿಸಿದರೆ ನಾವು ಕೆಲಸ ಮಾಡಿಸುತ್ತೇವೆ.

ಶ್ರೀ ಟಿ ಎಂ. ಮಂಜುನಾಥ.—ಶಾಲಾ ಕಟ್ಟಡ ಮಕ್ಕಳ ವಿದಾಭ್ಯಾಸಕ್ಕೆ ಅರ್ಹವಾಗಿದೆಯೇ ಇಲ್ಲವೇ ಎಂಬುದನ್ನು ತಜ್ಞರಿಂದ ಪರಿಶೀಲಿಸಿ ರಿಪೋರ್ಟ್ ತರಿಸಿದ್ದೀರಾ ? ಅರ್ಹವಾಗಿಲ್ಲ ವೆಂದು ಕಂಡುಬಂದರೆ ಎಷ್ಟು ಬೇಗ ಕಟ್ಟಿದ ಕಟ್ಟಿಸಿಕೊಡುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಟ್ಟಡ ಅರ್ಹವಾಗಿದೆಯೇ ಇಲ್ಲವೆ ಎಂಬುದನ್ನು ತಜ್ಞರಿಂದ ಪರೀಕ್ಷೆ ಮಾಡಿಸಬೇಕಾಗಿಲ್ಲ. ನಮ್ಮ ಕಣ್ಣಿಗೇ ಕಾಣುತ್ತದೆ. ಯೋಗ್ಯವಾಗಿದೆಯೇ ಇಲ್ಲವೇ ಎಂಬುದನ್ನು ಹೇಳುವುದಕ್ಕೆ ತಜ್ಞರೇ ಬೇಕಾಗಿಲ್ಲ. ಅನಾನುಕೂಲ ಇದೆ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ. ಆಗಲೇ ಶ್ರೀಮಾನ ಆನಿವಾಳದ ನಂಜಪ್ಪನವರಿಗೆ ನಾನು ಹೇಳಿದ, ತಾಲ್ಲೂಕ್ ಬೋರ್ಡಿನಿಂದ ಹಣ ಖರ್ಚು ಮಾಡಿ ರಿಪೇರಿ ಮಾಡಿಸಿಕೊಳ್ಳಿ ಎಂದು. ಅಲ್ಲಿಗೆ ಸಮಸ್ಯೆ ಮುಗಿಯಿತು ಎಂದು ಹೇಳುತ್ತಿಲ್ಲ. 4,58,000 ರೂಪಾಯಿಯ ಅಂದಾಜು ಕಟ್ಟಡಕ್ಕೆ ತಯಾರು ಮಾಡಿಸಿದ್ದೇವೆ. ಮುಖ್ಯಮಂತ್ರಿಗಳು ಅನೇಕ ಬೇಳೆ ಹೇಳಿದ್ದಾರೆ. ನೀರಾವರಿ, ಪವರ್‌ಗೆ ಪ್ರಾಧಾನ್ಯತೆ ಮೊದಲು ಕೊಡಬೇಕು, ನಂತರ ಕಟ್ಟಡಗಳಿಗೆ ಕೊಡಬೇಕು, ಕಟ್ಟಡಗಳಿಗೆ ನಿಧಾನವಾದರೂ ಚಿಂತೆ ಇಲ್ಲ ಎಂದು ಹೇಳಿದ್ದಾರೆ. ಹಣವನ್ನು ಕ್ರೋಡೀಕರಿಸಿ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕು ಎಂದು ಬೇಳೆ ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ಸಾಧ್ಯವಾದಷ್ಟು ಬೇಗ ಮಾಡಿಸುತ್ತೇವೆ.

N. R. W. S. Scheme in Sira, Gubbi and Chikkanayakanahalli Taluks

207. SRI T. TARE GOWDA (Kallambella).—Will the Minister for Public Works be pleased to state.—

(a) whether the estimates for National Rural Water Supply Scheme to the following village Panchayats Head-quarters has been sanctioned.